ಫಾರೆಸ್ಟ್ ಇಲಾಖಾ.

ತಾರೀಖು 30ನೇ ಮಾರ್ಚ್ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಮತ್ತೊಂದು ಹುಕುಂ ಕೊಡುವ ಪರಿಯಂತ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿಯ ಇದರಡೀ ಕಂಡ ಡಿಪೋಗಳಲ್ಲಿ ಮರಗಳ ಪರಾಜು ಸಾಲೀಯಾನಾ ಇದರಲೀ ನಮೂದಿರುವ ತಾರೀಖುಗಳಲ್ಲಿ ನಡಿಸಲ್ಪಡುವದು.

ಡಿಪೋ ಹೆಸರು.	ಸಾಲೀಯಾನಾ ಪರಾಜು ನಡಿಸುವ ತಾರೀಖು.
ತೆಲಗದ್ದೆ (ಅಜಮಾಯಿಷಿ ತರೀಕ್)	2ನೇ ಮೇ
ಷಿಕಾರಿಪುರ	7ನೇ ಡಿಟೋ
ಶಿರಾಳಕೊಪ್ಪ	8ನೇ ಡಿಟೋ
ಚನ್ನಗಿರಿ	13ನೇ ಡಿಟೋ
ಉಬ್ರಾಣಿ (ಅಜಮಾಯಿಷಿ ತರೀಕ್)	18ನೇ ಡಿಟೋ
ತರೀಕೆರೆ	20ನೇ ಡಿಟೋ
ಆಯಿನೂರು	22ನೇ ಡಿಟೋ
ಶಿವಮೊಗ್ಗ	24ನೇ ಡಿಟೋ
ಕಣಬೂರು	28ನೇ ಡಿಟೋ
ಲಕ್ಕುವಳ್ಳಿ	1ನೇ ಜೂ.

ಯಲ್. ರಿಕ್ಕೆಟ್ಸ್,
ಫಾರೆಸ್ಟ್ಸ್ ವ ಪ್ಲಾಂಟೇರ್ಷನ್‌ಗಳ
ಇನ್‌ಸ್ಪೆಕ್ಟರ್ ಜನರಲ್.

ತಾರೀಖು 28ನೇ ಮಾರ್ಚ್ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡೀಕಂಡ ತಾಲ್ಲೂಕುಗಳಲ್ಲಿನ ಹಿಡುವಳಿಯಲ್ಲಿ ಯಿಲ್ಲದ ಕಂದಾಯ ಗೊತ್ತಿಲ್ಲದಂಥಾ ಮತ್ತು ಗೊತ್ತು ಮಾಡಲ್ಪಟ್ಟ ಜಮೀನುಗಳು ಅಡಗಿರುವಂಥಾ ಡಿಸ್ಟ್ರಿಕ್ಟು ಫಾರೆಸ್ಟುಗಳ, ಗ್ರಾಮ ಬೇಲಿಗಳ, ಅಮೃತ ಮಹಲ್ ಕಾವಲ್‌ಗಳು ವಿನಾ, ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿ ಜಾಸೂರೆ ಹುಟ್ಟುವಳಿಗಳನ್ನ 1887ನೇ ಇಸವಿ ಮೇ 1ನೇ ಮಾರ್ಚ್ಂ ಲಾಗಾಯತು 1888ನೇ ಇಸವಿ ಏಪ್ರಿಲ್ 30ನೇ ಮಾರ್ಚ್ಂ ವರಿಗೆ ಜಾಸಾಯಿಸುವ ಹಕ್ಕುದಾರಿಯು ಆಯಾ ತಾಲ್ಲೂಕು ಅಮಲ್‌ದಾರ್ರ ರೂಬರೂ ಇದರಡೀಕಂಡ ತಾರೀಖುಗಳಲ್ಲಿ ಬಹಿರಂಗವಾದ ಪರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಸ್ಟೇಟ್ ಫಾರೆಸ್ಟುಗಳಲ್ಲಿ ಶೇರುವದಕ್ಕೋಸ್ಕರ ಹೊಸದಾಗಿ ಪದ್ದ ವಿಂಗಡಿಸಲ್ಪಟ್ಟ ವಿಸ್ತೀರ್ಣವು ಈ ಇಸ್ತಿಹಾರ್‌ನಾಮೆಯಲ್ಲಿ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ಶೇರಿ ಯಿರುತ್ತೆ.

ತಾಲ್ಲೂಕು.	ತಾರೀಖು.	ಮಾಹೆ	ಹುಟ್ಟುವಳೀ ತಪಶೀಲ್.
ಮೈಸೂರು	15	ಫೆಬ್ರವರಿ	1 ಅಳಲೇಕಾಯಿ, 2 ತಾರೇಕಾಯಿ, 3 ಶೀಗೇಕಾಯಿ, 4 ಅಂಟುವಾಳದ ಕಾಯಿ, 5 ದಿಂಡಗದಗೋಂದ, 6 ಕಾಡು ಅರಿಸಿನ, 7 ಜೇನುಮೇಣ, 8 ಅರಗು ಜೇನುತುಪ್ಪ, 9 ಕಪಿಲೇರಂಗು, 10 ಪಪ್ಪಳಿಚಕ್ಕೆ, 11 ಪತಂಗ, 12 ಮಡ್ಡಿ, 13 ಚಿಲ್ಲದ ಬೀಜ, 14 ಚಕ್ಕೋತೇಬೀಜ, 15 ಹೊಂಗೇಬೀಜ, 16 ಗೇರು ಬೀಜ, 17 ಹಾಲ್‌ಮಡ್ಡಿ, 18 ಆವರಿಕೆಮೇಣ, 19 ಜೆಂಕೇಕಂಬು, 20 ಗುಗ್ಗಳ ವಗೈರೆ.
ಯಡತೊರೆ	15		
ನಾಗಮಂಗಲ	15		
ಅತ್ತಿಕುಪ್ಪೆ	15		
ಮಂಡ್ಯ	15		
ಶ್ರೀರಂಗಪಟ್ಟಣ	16		
ತಿರುಮಕೂಡ್ಲು ನರಸೀಪುರ	15		
ಮಳವಳ್ಳಿ	15		
ಹುಣಸೂರು	19		
ಹೆಗ್ಗಡದೇವನಕೋಟೆ	21		
ಗುಂಡ್ಲುಪೇಟೆ	25		
ಚಾಮರಾಜನಗರ	28		
ನಂಜನಗೂಡು	26		